ಬರೆದ ಅದೇ ಆಧಾರದ ಮೇಲೆ ಅವರು ಕೋರ್ಟ್‌ನಲ್ಲಿ ಸ್ಟೇ ಆರ್ಡರ್ ತಂದಿದ್ದಾರೆ. ಬಹುಶಃ ಅವರು ಎರಡು-ಮೂರು ತಿಂಗಳ ಹಿಂದೆ ಸ್ಟೇ ಆರ್ಡರ್ ತಂದಿದ್ದಾರೆ. ಯಾವ ದೇಟಿಗೆ ಸ್ಟೇ ತಂದಿದ್ದಾರೆಂದು ಇನ್ನರಲ್ಲಿ ತೋರಿಸಿಲ್ಲವೆನ್ನುವುದು ನನ್ನ ಪ್ರಶ್ನೆ.

ಶ್ರೀ ಬಿ. ಬಸವಲಿಂಗಪ್ಪ:- ದಿನಾಂಕ 4-12-1991ಕ್ಕೆ ಸ್ಟೇ ಆರ್ಡರ್ ಇದೆ.

ಶ್ರೀ ಬಾಬುರಾವ್ ಚವಾಣ್:- ದಿನಾಂಕ 4-12-91ಕ್ಕೆ ಸ್ಟೇ ಆರ್ಡರ್ ತಂದಿದ್ದಾರೆ 1-2-92ರ ತನಕ ಎರಡು ತಿಂಗಳುಗಳಿಂದ ಏತಕ್ಕೆ ಅಧಿಕಾರಿಗಳು ಸುಮ್ಮನೆ ಕುಳಿತರು? ಏತಕ್ಕೆ ನೀವು ಅಧಿಕಾರಿಗಳಿಗೆ ಸ್ಯಾಲರಿ ಕೊಡುವುದಿಲ್ಲವೆ? ಅವರಿಗೆ ಕೆಲಸ ಮಾಡುವುದಕ್ಕೆ ಇಷ್ಟವಿಲ್ಲವೆ?

ಶ್ರೀ ಬಿ. ಬಸವಲಿಂಗಪ್ಪ:- ಏತಕ್ಕೆ ಹಾಕಿಲ್ಲ? ಹಾಕಿಲ್ಲ, ನಾನೇನು ಮಾಡುವುದು? ಅವರು ಹಾಗೆ ಮಾಡಿದ್ದಾರೆ ಏತಕ್ಕೆ ಹಾಕಲಿಲ್ಲವೆಂದು ನಾವು ತಗಾದೆ ತೆಗೆದುಕೊಳ್ಳಬೇಕು.

ಶ್ರೀ ಬಾಬುರಾವ್ ಚವಾಣ್:- ನಾನು ನಿಮ್ಮನ್ನು ಕೇಳುತ್ತೇನೆ, ದಿನಾಂಕ 2-12-91ರಂದು ಸ್ಟೇ ಆರ್ಡರ್ ನಿಮ್ಮ ಇಲಾಖೆಗೆ ಒಂದು ಮುಟ್ಟಿದೆ. ಫೆಬ್ರುವರಿ ಒಂದನೇ ತಾರೀಖು ಸ್ಟೇ ವೆಕೇಟ್ ಮಾಡಲಿಕ್ಕೆ ಅರ್ಜಿಯನ್ನು ಕೊಟ್ಟಿದ್ದಾರೆ. ಎರಡು ತಿಂಗಳು ಅಧಿಕಾರಿಗಳು ಏತಕ್ಕೆ ಸುಮ್ಮನೆ ಕುಳಿತರು? ಅದಕ್ಕೇನು ಕಾರಣ ಎಂಬುದನ್ನು ಸ್ಪಷ್ಟವಾಗಿ ತಮ್ಮ ಅಭಿಪ್ರಾಯ ಹೇಳಬೇಕು. ಶಪಬಾದ್‌ನಲ್ಲಿರತಕ್ಕ ಜನ ಸಿಮೆಂಟ್ ತಿನ್ನಬೇಕೆ? ತಿನ್ನು ಅಂದರೆ ಊಟ ಮಾಡುವುದನ್ನು ಬಿಟ್ಟು ಸಿಮೆಂಟೇ ತಿನ್ನುತ್ತೇವೆ. ಎಷ್ಟು ತಿಂಗಳವರೆಗೆ ಏತಕ್ಕೆ ಸುಮ್ಮನೆ ಕುಳಿತರು? ಫ್ಯಾಕ್ಟರಿ ಮಾಲೀಕರ ಜೊತೆಯಲ್ಲಿ ಚಿಲ್ಲಾಟವಾಡಿಕೊಂಡು ಇರುತ್ತಾರೇನು? ಈ ಬಗ್ಗೆ ಸ್ಪಷ್ಟವಾಗಿ ತಮ್ಮ ನಿಲುವೇನು ಎಂಬುದನ್ನು ಹೇಳಬೇಕು.

ಶ್ರೀ ಬಿ. ಬಸವಲಿಂಗಪ್ಪ:- ಹಾಕಿಲ್ಲ, ಕಾರಣ ಸ್ಪಷ್ಟ. ಅವರು ಹಾಕಲಿಲ್ಲ. ಅವರಿಗೆ ತಿಳುವಳಿಕೆ ಇದೆಯೋ ಇಲ್ಲವೋ ಎನ್ನುವುದು ಒಂದು.

ಶ್ರೀ ಬಾಬುರಾವ್ ಚವಾಣ್:- ಒಳ್ಳೆಯ ಆಫೀಸರ್‌ಗಳನ್ನು [redacted]ಪಾಯಿಂಟ್‌ಮೆಂಟ್ ಮಾಡಿ ಕೆಲಸ ನಾಡದಿರುವವರನ್ನು ತಗೆದುಹಾಕಿ. ಒಳ್ಳೆಯ ಆಫೀಸರ್ಸ್ ನಮ್ಮಲ್ಲಿ ಸಿಗುತ್ತಾರೆ. ಕರ್ನಾಟಕ ರಾಜ್ಯದಲ್ಲಿ ಒಳ್ಳೆಯ ಇಂಟಲಿಜೆಂಟ್ ಆಫೀಸರ್ಸ್ ಇದ್ದಾರೆ. ಇವರು ಎರಡು ತಿಂಗಳಿಂದ ಸುಮ್ಮನೆ ಇರುವುದಕ್ಕೆ ಕಾರಣವೇನು? ಎರಡು ತಿಂಗಳು ಏತಕ್ಕೆ ಸುಮ್ಮನೆ ತಡಮಾಡಿದ್ದಾರೆ ಹೇಳಿ?

ಶ್ರೀ ಬಿ. ಬಸವಲಿಂಗಪ್ಪ:- ಮಾನ್ಯ ಅಧ್ಯಕ್ಷರೇ, 1985ನೇ ಇಸವಿಯಿಂದ ಅವರು ಅನುಮತಿ ಇಲ್ಲದೆ ಕಾರ್ಖಾನೆಯನ್ನು ನಡೆಸುತ್ತಿದ್ದಾರೆ. ಆವೊತ್ತಿನಿಂದ ಇವೊತ್ತಿನವರೆಗೆ ಅದೇ ರೀತಿ ನಡೆಸುತ್ತಿದ್ದಾನೆ. ನಮ್ಮ ಅಧೀನಕ್ಕೆ ಬಂದಿಲ್ಲದಂತಹ ಜನ ಪನಿದ್ದಾರೆ ಅವರು ಬುದ್ಧಿವಂತರಿದ್ದಾರೋ ಅಥವಾ ಇಲ್ಲವೋ ಎನ್ನುವುದು ನನಗೆ ಅನುಮಾನ. ಅದಕ್ಕೋಸ್ಕರ ನನ್ನ ಗಮನಕ್ಕೆ ಅದು ಬಂದಿಬೆ. ಇನ್ನು ಮುಂದೆ ತೀವ್ರವಾಗಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು:- ಅವರು ಅಲ್ಲಿಗೆ ಹೋದ ತಕ್ಷಣ ಅಲ್ಲಿ ಕೆಲಸ ಮಾಡುತ್ತಾರೆ.

ಅಮ್ಮಸಂದ್ರದ ಮೈಸೂರು ಸಿಮೆಂಟ್ ಕಾರ್ಖಾನೆಯಿಂದ ವಾಯು ಮಾಲಿನ್ಯ

153 (918) ಶ್ರೀ ಎಸ್. ರುದ್ರಪ್ಪ (ತುರುವೇಕೆರೆ):- ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಿಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆಯ ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಮ್ಮಸಂದ್ರದಲ್ಲಿನುವ ಮೈಸೂರು ಸಿಮೆಂಟ್ ಕಾರ್ಖಾನೆಯಿಂದ ಹೊಗೆ ಮತ್ತು ಧೂಳು ಬರುತ್ತಿರುವುದರಿಂದ ಜನರ ಆರೋಗ್ಯಕ್ಕೆ ತೊತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬರುತ್ತಿದೆಯೆ?

ಆ) ಬಂದಿದ್ದಲ್ಲಿ ಪರಿಸರ ಮತ್ತು ವಾಯು ಮಾಲಿನ್ಯ ಇಲಾಖೆಯವರು ಕಾರ್ಖಾನೆಗೆ ಭೇಟಿ ನೀಡಿದ್ದಾರೆಯೆ?

ಇ) ಸರ್ಕಾರದವರು ಈವರೆಗೆ ಕೈಗೊಂಡಿರುವ ಕ್ರಮಗಳೇನು ಇಲ್ಲದಿದ್ದಲ್ಲಿ ಕಾರಣವೇನು?

ಈ) ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಕಾರ್ಖಾನೆಯಿಂದ ಬರುವ ಧೂಳನ್ನು ತಡೆಯಲು ಸರ್ಕಾರದಿಂದ ಸಾಧ್ಯವಿಲ್ಲವೇ? ಹಾಗಿದ್ದಲ್ಲಿ ಎಂದಿನಿಂದ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಸವಲಿಂಗಪ್ಪ:- (ವಿಜ್ಞಾನ ಮತ್ತು ತಂತ್ರಜ್ಞಾನ ಜೀವವೈವಿಧ್ಯ ಶಾಸ್ತ್ರ ಮತ್ತು ಪರಿಸರ ಇಲಾಖೆಯ ಸಚಿವರು)

ಅ) ಬಂದಿದೆ.

ಆ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಆಗಾಗ್ಗೆ ಕಾರ್ಖಾನೆಗೆ ಪರಿನೀಕ್ಷಣೆಗಾಗಿ ಭೇಟಿ ನೀಡುತ್ತಿರುತ್ತಾರೆ.

ಇ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕಾರ್ಖಾನೆಗೆ ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸಲು ನಿರ್ದೇಶನ ನೀಡಿದೆ. ಅಧಿನಿಯಮ 27 ಮತ್ತು 32 ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1981ರ ಪ್ರಕಾರ ತುರುವೇಕೆರೆ ನ್ಯಾಯಾಲಯದಲ್ಲಿ ಕಟ್ಟಿ ಸಂಖ್ಯೆ : ಪಿ.ಎಸ್.:9:87 ರಲ್ಲಿ ಮೊಕದ್ದಮೆ ಹೂಡಲಾಗಿದೆ.

ಈ) ಸಾಧ್ಯವಿದೆ. ಈ ದಿಶೆಯಲ್ಲಿ ಉದ್ದಿಮೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸಲು ನಿರ್ದೇಶಿಸಿದೆ. ಸದರಿ ಉದ್ದಿಮೆಯು ಈಗಾಗಲೇ ಕಿಲ್ನ್ ನಂ. 3ಕ್ಕೆ ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸಿದ್ದು ಮತ್ತು ಕಿಲ್ನ್ ನಂ. 4ಕ್ಕೆ ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ನವೀಕರಿಸಲು ಕಾರ್ಯೋನ್ಮುಖವಾಗಿದೆ. ಕಿಲ್ನ್ ನಂ. 1 ಮತ್ತು 2 ನಿಷ್ಕ್ರಿಯವಾಗಿದೆ.

ವಾಯು ಮಾಲಿನ್ಯ ಮತ್ತು ಪರಿಸರ ಸಂರಕ್ಷಣಾ ಕಾಯಿದೆ ಅನ್ವಯ ಅಡಳಿತದವರ ಮೇಲೆ ಕ್ರಮವನ್ನು ತೆಗೆದುಕೊಳ್ಳಲು ಯೋಚಿಸಲಾಗಿದೆ. ಜಲ ಮಾಲಿನ್ಯ (ನಿರೋಧ ಮತ್ತು ನಿಯಂತ್ರಣ) ಕಾಯಿದೆ ಮೂಲಕವೂ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಸ್. ರುದ್ರಪ್ಪ:- ಮಾನ್ಯ ಅಧ್ಯಕ್ಷರೇ, ನಮ್ಮ ತಾಲ್ಲೂಕಿನಲ್ಲಿ ಅಮ್ಮಸಂದ್ರದಲ್ಲಿ ಸಿಮೆಂಟ್ ಫ್ಯಾಕ್ಟರಿ ಶುರುವಾಗಿ 25 ವರ್ಷಗಳಾಯಿತು.

ಅಧ್ಯಕ್ಷರು:- ಹಾಗಾದರೆ ಸಿಲ್ವರ್ ಜುಬಿಲಿ ನೆಲಬರೇಟ್ ಮಾಡಬೇಹುದು.

ಶ್ರೀ ಎಸ್. ರುದ್ರಪ್ಪ:- ಫ್ಯಾಕ್ಟರಿಯಿಂದ ಹೊರಹೊಮ್ಮುವ ಸಿಮೆಂಟ್ ಧೂಳನ್ನು ತಡೆಗಟ್ಟಬೇಕೆಂದು ಹೇಳಿ ದಿವಂಗತ ಲಕ್ಕಪ್ಪನವರು ಪಾರ್ಲಿಮೆಂಟ್‌ನಲ್ಲಿ ಅನೇಕ ಸಾರಿ ಇದರ ಬಗ್ಗೆ ಮಾತನಾಡಿದ್ದಾರೆ. ಅದರ ಬಗ್ಗೆ ನಾನು ಪ್ರಶ್ನೆಯನ್ನು ಹಾಕಿದ್ದೆ ಅದಕ್ಕೆ ಇವತ್ತು ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ರಾಜ್ಯದ ಮಾಲಿನ್ಯ ನಿಯಂತ್ರಣ ಮಂಡಳಿಯವರು ಭೇಟಿ ಕೊಟ್ಟಿದ್ದಾರೆ. ಅವರ ಬಗ್ಗೆ ಶಿಸ್ತಿನ ಕ್ರಮವನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಅದು ಸತ್ಯಕ್ಕೆ ದೂರವಾದುದು. ಆ ಫ್ಯಾಕ್ಟರಿಯಲ್ಲಿರತಕ್ಕ ಸಿದ್ದೇಗೌಡ ಎಂಬ ಪಿ.ಆರ್.ಒ. ಅಧಿಕಾರಿಯನ್ನು ಇಟ್ಟುಕೊಂಡು ಅವರ ಜೊತೆಯಲ್ಲಿ ಶಾಮೀಲಾಗಿ ಸಿಮೆಂಟ್ ಧೂಳು ಏನು ಹೊರಗೆ ಬರುತ್ತಿದೆ ಅದನ್ನು ಸರಿಯಾಗಿ ನಿಲ್ಲಿಸಿಲ್ಲ, ಮಾನ್ಯ ಸಚಿವರು ಅದರ ಬಗ್ಗೆ ಶಿಸ್ತಿನ ಕ್ರಮವನ್ನು ತೆಗೆದುಕೊಂಡು ನಮ್ಮ ತಾಲ್ಲೂಕಿಗೆ ಆಗಿರತಕ್ಕ ಅನ್ಯಾಯವನ್ನು, ಅಲ್ಲಿನ ರೈತರಿಗೆ ಆಗಿರತಕ್ಕ ಅನ್ಯಾಯವನ್ನು ಜನ ಜಾನುವಾರುಗಳಿಗೆ ಆಗಿರತಕ್ಕ ಅನ್ಯಾಯವನ್ನು ತಡೆಗಟ್ಟಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ:- ಮಾನ್ಯ ಅಧ್ಯಕ್ಷರೇ, ನಾನು ಆ ಕಾರ್ಖಾನೆಗೆ ಭೇಟಿ ಕೊಡಬೇಕೆಂದು ಮನಸ್ಸು ಮಾಡಿದ್ದೇನೆ. ನಾನು ಇನ್ನು ಹೋಗಿಲ್ಲ. 1961ನೇ ಇಸವಿಯಿಂದ ಇವತ್ತಿನವರೆಗೆ ಅವರು ಹಾಗೆಯೇ ನಡೆಸಿಕೊಂಡು ಬರುತ್ತಿದ್ದಾರೆ. ನಮ್ಮ ಕಾಯಿದೆ ಬಂದಿರುವುದು 1981ನೇ ಇಸವಿಯಲ್ಲಿ. ಅಲ್ಲಿಯವರೆಗೂ ಯಾರಿಗೆ ಲೆಕ್ಕಿಸದೆ ಅವರು ಕೆಲಸ ಮಾಡಿಕೊಂಡು ಬಂದಿದ್ದಾರೆ. ಧೂಳು ಇದೆ ಅದನ್ನು ನಾನು ಕಣ್ಣಿನಿಂದ ನೋಡಿದ್ದೇನೆ, ಇದು ಪರಿಸರದ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆ, ಧೂಳು ಬಿದ್ದು ಯಾವ ರೀತಿಯ ನಷ್ಟವಾಗುತ್ತದೆ ಎನ್ನುವುದು ನನಗೆ ಗೊತ್ತಿದೆ. ಆದರೆ ಅವರೇನು ಉಪಕರಣಗಳನ್ನು ಅಳವಡಿಸಿಕೊಂಡಿದ್ದಾರೆ ಅವು ಕೆಟ್ಟು ಹೋಗಿವೆ. ಅವುಗಳನ್ನು ರಿಪೇರಿ ಮಾಡಬೇಕೆಂದು ನಾವು ತಗಾದೆ ಮಾಡಿದ್ದೇವೆ. ಅವರು ಇನ್ನೂ ರಿಪೇರಿ ಮಾಡಿಲ್ಲ, ನಾನು ಅಶ್ವಾಸನೆಯನ್ನು ಕೊಡುತ್ತೇನೆ, ನಾನು ಅಲ್ಲಿಗೆ ಹೋಗಿ ಅದನ್ನು ಪರಿಶೀಲಿಸಿ ಮಾಡಿ ಮುಂದಿನ ಕ್ರಮವನ್ನು ಯಾವ ರೀತಿ ತೆಗೆದುಕೊಳ್ಳಬೇಕು ಏನ್ನುವ ಬಗ್ಗೆ ನಾನು ಯೋಚನೆ ಮಾಡುತ್ತೇನೆ. ಮತ್ತೊಂದು ವಿಷಯ ಏನೆಂದರೆ ಪರಿಸರ

ಕಾಯಿದೆಯಲ್ಲಿ ನಾವು ಅವರಿಗೆ ತಗಾದ ನೋಟೀಸ್ ಕೊಟ್ಟು ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ರುದ್ರಪ್ಪ:- ಸ್ಟೇ ಆರ್ಡರ್‌ನ್ನು ಯಾವಾಗ ವೇಕೇಟ್ ಮಾಡಿಸುತ್ತೀರಿ?

ಅಧ್ಯಕ್ಷರು:- ಸ್ಟೇ ಆರ್ಡರ್‌ನ್ನು ಇವರು ಕೊಟ್ಟಿಲ್ಲ.

ಶ್ರೀ ಎಸ್. ರುದ್ರಪ್ಪ:- ಮಾಡಿಸುವುದಕ್ಕೆ ಪ್ರಯತ್ನ ಪಡಬೇಕು. ಎಷ್ಟು ದಿವಸಗಳಲ್ಲಿ ಮುಡುತ್ತೀರಿ?

ಅಧ್ಯಕ್ಷರು:- ಆದು ಅವ್ಯಾಪತವಾಗಿ ನಡೆಯತಕ್ಕಂಥ ಪ್ರಯತ್ನ.

ಶ್ರೀ ಎಸ್. ರುದ್ರಪ್ಪ:- ಮುಖ್ಯಮಂತ್ರಿಗಳು ಪ್ರಯತ್ನ ಮಾಡಿದರೆ ಸ್ಟೇ ಆರ್ಡರ್‌ನ್ನು ಬೇಗನೆ ವಕೇಟ್ ಮಾಡುವುದಕ್ಕೆ ಬರುತ್ತದೆ.

ಅಧ್ಯಕ್ಷರು:- ನೀವು ಡಬಲ್ ಪ್ರಯತ್ನ ಮಾಡಿ ಸ್ವಾಮಿ.

ಭೂ ಸುಧಾರಣೆಯನ್ವಯ ಗೇಣಿದಾರರಿಂದ ಜಮೀನಿನ ಪರಭಾರೆ

154 (1090) ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭೂ ಸುಧಾರಣೆ ಕಾಯ್ದೆಯಡಿ ಜಮೀನು ಪಡೆದಿರುವ ಗೇಣಿದಾರರಿಗೆ ತಮ್ಮ ಜಮೀನು ಪರಭಾರೆ ಮಾಡಲು ಇರುವ ನಿಷೇಧವನ್ನು ತೆಗೆದು ಹಾಕಲು ಸರ್ಕಾರ ಉದ್ದೇಶಿಸಿದೆಯೇ?

ಆ) ಆರ್ಥಿಕವಾಗಿ ತೊಂದರೆಯಲ್ಲಿರುವವರಿಗೆ ಕೃಷಿ ಯೋಗ್ಯವಿಲ್ಲದೆ ಸಣ್ಣ ಹಿಡುವಳಿದಾರರಿಗೆ ಮೇಲ್ಕಂಡ ಕಾಯ್ದೆಯಿಂದ ವಿನಾಯ್ತಿ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ಇಲ್ಲ

ಆ) ಮೇಲಿನ ಕಾರಣದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ವಿಜಯಕುಮಾರ್ ಶೆಟ್ಟಿ:- ಮಾನ್ಯ ಅಧ್ಯಕ್ಷರೇ, ಲ್ಯಾಂಡ್ ರಿಫಾರ್ಮ್ಸ್‌ನಲ್ಲಿ ಮತ್ತು ಇತರೇ ರೀತಿಯಲ್ಲಿ ಸರ್ಕಾರದಿಂದ ಕೊಡ ಮಾಡಲ್ಪಟ್ಟ ಜಮೀನು ಏನು ಇದೆ, ಅದಕ್ಕೆ 15 ವರ್ಷದ ಲಿಮಿಟೇಶನ್ ಹಾಕಿದ್ದಾರೆ. ಇದನ್ನು ದಯವಿಟ್ಟು ಕಡಿಮೆ ಮಾಡಬೇಕು. ಏಕೆಂದರೆ ಕೆಲವರು ಒಳಗೊಳಗಿಂದಲೇ ನಗರಪ್ರದೇಶಗಳಲ್ಲಿ ಇರತಕ್ಕಂಥ ಜಮೀನು ಏನಿದೆ, ಅದನ್ನು ಅಂಡರ್‌ಸ್ಟೇಂಡಿಂಗ್ ಮೇಲೆ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಕಾರ್ಪೊರೇಷನ್ ಮತ್ತು ತಾಲ್ಲೂಕು ಮುನಿಸಿಪಾಲಿಟಿಗಳಿಗೆ ನಷ್ಟವಾಗುತ್ತದೆ. ಅವರಿಗೆ ಈ ಒಂದು ಲಿಮಿಟೇಶನ್ 15 ವರ್ಷ ಎಂದು ಏನು ಕೊಟ್ಟಿದ್ದಾರೆ, ಅದನ್ನು ಕಡಿಮೆ ಮಾಡಬೇಕೆಂದು ಸಾರ್ವಜನಿಕರಿಂದ ಹಲವಾರು ಮನವಿಗಳು ಬಂದಿವೆ. ಇದನ್ನು ಸರ್ಕಾರ ಖಂಡಿತವಾಗಿಯೂ ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಈ 15 ವರ್ಷಗಳ ಕಂಡೀಷನ್ ಹಾಕಿರುವ ಉದ್ದೇಶ ಏನೆಂದರೆ ಬಡವರು ಜಮೀನುಗಳನ್ನು ಪರಭಾರೆ ಮಾಡಿಕೊಳ್ಳಬಾರದು ಮತ್ತು ಆ ಜಮೀನನ್ನು ಅವರು ಇಟ್ಟುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಆ ಕಂಡೀಷನ್ ಹಾಕಿದ್ದೇವೆ. ಹೆಚ್ಚಾಗಿ ಸೌತ್‌ಕೆನರಾ, ನಾರ್ತ್‌ಕೆನರಾ ಜಿಲ್ಲೆಗಳಿಂದ ಈ ಬೇಡಿಕೆ ಇದೆ. ಆದರೆ ಬೇರೆ ಕಡೆ ಎಲ್ಲಾ ಅಗ್ರಿಕಲ್ಚರ್ ಲ್ಯಾಂಡ್ ಇರುವುದರಿಂದ ಇದನ್ನು ತೆಗೆದುಹಾಕಿ ಎಂದು ಹೆಚ್ಚಿನ ಮನವಿ ಬಂದಿಲ್ಲ. ಏಪಡನೆಯದಾಗಿ 15 ವರ್ಷಗಳ ಕಂಡೀಶನ್ ತೆಗೆದರೆ ಸಾಕಷ್ಟು ಜನ ಬಂದು ಲ್ಯಾಂಡ್‌ಲಾರ್ಡ್ ಆಗಲಿ, ಬೇರೆಯವರಾಗಲೀ ಇದನ್ನು ಪರ್ಚೇಸ್ ಮಾಡಿಕೊಂಡು ಅಥವಾ ಇವರಿಗೆ ಹಣದ ಆಸೆಗಾಗಿ ಆಸ್ತಿ ಕಳೆದುಕೊಳ್ಳುವ ಸಂಭವ ಇರುತ್ತದೆ. ಆದರೆ ಅವರಿಗೆ ಸಹಾಯ ಮಾಡುವುದಕ್ಕೆ ಏನು ಮಾಡಬಹುದು ಎಂದರೆ, ಅಪ್ಲಿಕೇಶನ್ ಕೊಟ್ಟರೆ ಕನ್ಸರ್ನ್ ಮಾಡಿ ಕೊಡಬಾಹುದು ಕನ್ಸರ್ನ್ ಮಾಡಿ ಕೊಟ್ಟ ಮೇಲೆ ಬೇಕಾದರೆ ಪರಭಾರೆ ಮಾಡಿಕೊಳ್ಳುವುದಕ್ಕೆ ಪರ್ಮಿಶನ್ ಕೊಡಬಹುದು.